**ಸಾಕ್ಷಿಗೆ ದಿನಾಂಕಃ13-10-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. GNC ವಕೀಲರಿಂದ ::**

ದಾವಾ ಶೆಡ್ಯೂಲ್ ಸ್ವತ್ತಿನ assessment ಸಂಖ್ಯೆ 681/ಬಿ ಆಗಿರುತ್ತದೆ. ಸದರಿ ಆಸ್ತಿಯು ನನಗೆ ಪಂಚಾಯಿತಿಯಿಂದ ಮಂಜೂರಿ ಮಾಡಲಾಗಿರುತ್ತದೆ. ಸದರಿ ಮಂಜೂರಾತಿಗೆ ಸಂಬಂಧಪಟ್ಟಂತೆ ನನ್ನ ಬಳಿ ಹಕ್ಕು ಪತ್ರ ಇದ್ದು ಅದನ್ನು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಪಂಚಾಯಿತಿಯಿಂದ ನನಗೆ ಯಾವುದೇ ಹಕ್ಕು ಪತ್ರ ನೀಡದಿದ್ದರೂ ಮತ್ತು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ಜಲಜಮ್ಮ ಆಗಿದ್ದು, ಅವರ ಹೆಸರಿನಲ್ಲಿ ಯಾವುದೇ ಸ್ತಿರಾಸ್ತಿ ಇರುವುದಿಲ್ಲ. ದಾವಾ ಆಸ್ತಿಯ ಸುತ್ತಮುತ್ತಲೂ ನನ್ನ ತಾಯಿಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ. ನನಗೆ ಕನ್ನಡ ಭಾಷೆ ಓದಲು ಬರುವುದಿಲ್ಲ. ನಿಪಿ1 Assessment extract ನಲ್ಲಿ ನನ್ನ ಹೆಸರು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ assessment ಸಂಖ್ಯೆ 681/ಬಿ ಸ್ವತ್ತು ಸಾಕಮ್ಮ ಎನ್ನುವವರ ಹೆಸರಿಗೆ ಇ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ನಿಪಿ4 ಕಂದಾಯ ರಶೀದಿ ಮೇಲೆ ಹೇಳಿದ ಸಾಕಮ್ಮ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿಯ ಹಿಂದೆ ಇದ್ದ ಯಾವುದೋ ಒಂದು ಅಧಿಕಾರಿ ಜೊತೆ ಶಾಮಿಲಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಇಂದಿರಾ ಅವಾಜ್ ಯೋಜನೆಯಡಿಯಲ್ಲಿ ಮನೆ ನಿರ್ಮಾಣ ಮಾಡಿರುವುದಾಗಿ ಹೇಳುತ್ತಿದ್ದು, ಸದರಿ ಮನೆಗೆ ಸಂಬಂಧಪಟ್ಟ ದಾಖಲಾತಿಗಳು ಸಹ assessment ಸಂಖ್ಯೆ 681/ಬಿ ಗೆ ಸಂಬಂಧಪಟ್ಟಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ assessment ಸಂಖ್ಯೆ 681/ಬಿ assessment ಸಂಖ್ಯೆ ನನ್ನ ಹಾಗೂ ಸಾಕಮ್ಮ ಇಬ್ಬರ ಹೆಸರಿನಲ್ಲೂ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಹೇಳುತ್ತಿರುವ ಬಾವಿ ಹಾಗೂ ಬಾವಿ ಜಾಗ ಪಂಚಾಯಿತಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ನನಗೆ ಹಾಗೂ ಸಾಕಮ್ಮ ರವರಿಗೆ ಇರುವ ವ್ಯಾಜ್ಯವನ್ನು ದುರುಪಯೋಗಪಡಿಸಿಕೊಂಡು ಪಂಚಾಯಿತಿಯ ಬಾವಿ

ಉಪಯೋಗಿಸಲು ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ಆ ರೀತಿ ತೊಂದರೆ ಮಾಡಿದ ಕಾರಣ 1 ರಿಂದ 4 ನೇ ಪ್ರತಿವಾದಿಗಳು ನನ್ನ ವಿರುದ್ದ ಸಣ್ಣ ಗಲಾಟೆ ಮಾಡಿದ್ದು, ಅವರ ವಿರುದ್ದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಇ ಸ್ವತ್ತು ಸಾಕಮ್ಮ ರವರ ಹೆಸರಿನಲ್ಲಿ ಇರುವ ಕಾರಣ ನಾನು ಈ ದಾವೆಯಲ್ಲಿ ಯಾವುದೇ ಪರಿಹಾರವನ್ನು ಪಡೆಯಲು ಅರ್ಹಳಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟ ಯಾವುದೇ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ 30 ವರ್ಷಗಳಿಂದ ಸ್ವಾಧೀನದಲ್ಲಿ ಇರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತು ನನ್ನ ಆಸ್ತಿಯಾಗದಿದ್ದರೂ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. **ನಾನು ಹೇಳುತ್ತಿರುವಂತೆ ನನಗೆ ಪ್ರತಿವಾದಿಗಳು ಯಾವುದೇ ತೊಂದರೆ ನೀಡಿರುವುದಿಲ್ಲ** ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾ:

ತರೀಕೆರೆ.

ಸಾಕ್ಷಿಯ ಸಹಿ: